

ವಿಧಾನಸೌಧ, ಬೆಂಗಳೂರು

# ಅಧ್ಯಾಯ ೧೨ ಕರ್ನಾಟಕ ಹಾಗೂ ಭಾರತ



# ಅಧ್ಯಾಯ ೧೨

## ಕರ್ನಾಟಕ ಹಾಗೂ ಭಾರತ

ನಮ್ಮ ಕಾರ್ಖಾನೆಗಳ ಬಗ್ಗೆ ಬಹಳ ಹೆಮ್ಮೆ ಇದೆ. ಪ್ರಾದೇಶಿಕತೆ ಎಂದು ಕರೆಯಬಹುದೇನೋ ಎಂಬ ಆತಂಕದ ನಡುವೆಯೂ ಮೂಲ ಮೈಸೂರಿಗರ ಮುಂದೆ ಈ ಕೆಳಗಿನ ಆದರ್ಶವನ್ನು ಇಡಲಿಚ್ಛಿಸುತ್ತೇನೆ.

"ಮೈಸೂರಿಗರು" ಮೈಸೂರು ಸಾಬೂನಿನಿಂದಲೇ ಮೈತೊಳೆಯಬೇಕು, ಮೈಸೂರು ಟವೆಲ್‌ನಿಂದಲೇ ಮೈ ಒರೆಸಿಕೊಳ್ಳಬೇಕು. ಮೈಸೂರು ರೇಷ್ಮೆ ಉಡುಪನ್ನೇ ಧರಿಸಬೇಕು. ಮೈಸೂರು ಕುದುರೆಗಳ ಮೇಲೆಯೇ ಸವಾರಿ ಮಾಡಬೇಕು. ಮೈಸೂರು ಮಾದರಿಯ ಆಹಾರವನ್ನೇ ಸಮೃದ್ಧವಾಗಿ ಸೇವಿಸಬೇಕು. ಮೈಸೂರು ಸಕ್ಕರೆ ಬೆರೆಸಿದ ಮೈಸೂರು ಕಾಫಿಯನ್ನೇ ಕುಡಿಯಬೇಕು. ಮನೆ ನಿರ್ಮಿಸಲು ಮೈಸೂರಿನ ಮರ, ಮೈಸೂರು ಕಬ್ಬಿಣ, ಮೈಸೂರು ಸಿಮೆಂಟನ್ನೇ ಬಳಸಬೇಕು. ಮೈಸೂರು ಪೀಠೋಪಕರಣಗಳಿಂದಲೇ ಮನೆಯನ್ನು ಅಲಂಕರಿಸಬೇಕು. ಬರೆಯಲು ಮೈಸೂರು ಪೇಪರನ್ನೇ ಬಳಸಬೇಕು,

(ದಿವಾನ್ ಮಿರ್ಜಾ ಇಸ್ಮಾಯಿಲ್ ಅವರು ದಿನಾಂಕ ಐದು ಆಗಸ್ಟ್ 1938ರಂದು ಮದ್ರಾಸಿನ ಆಕಾಶವಾಣಿಯಲ್ಲಿ ಮಾಡಿದ ಭಾಷಣದ ಭಾಗವಿದಾಗಿದ್ದು, "ಮೈಸೂರು ಅಂಡ್ ಮಾಡರ್ನ್ ಇಂಡಸ್ಟ್ರೀಸ್" ಕೃತಿಯನ್ನಾಧರಿಸಿ ಇದನ್ನು ಉಲ್ಲೇಖಿಸಲಾಗಿದೆ).

***ಮೈಸೂರಿನ ಬಗ್ಗೆ ಆಕಾಶವಾಣಿಯಲ್ಲಿ ಪ್ರಸಾರವಾದ ಸರ್ ಮಿರ್ಜಾ ಇಸ್ಮಾಯಿಲ್ ಅವರ ಭಾಷಣದ ಭಾಗ***

ಕರ್ನಾಟಕವು ಭಾರತ ಒಕ್ಕೂಟದ ಒಂದು ರಾಜ್ಯವಾಗಿದ್ದು, ೭೪,೧೨೨ ಚ.ಮೈಲಿಗಳ ಪ್ರದೇಶ ಹಾಗೂ ೨೦೦ ಮೈಲಿಗಳ ನಿಡಿದಾದ ಕರಾವಳಿಯನ್ನು ಹೊಂದಿದೆ. ರಾಜ್ಯದಲ್ಲಿ ಹಲವಾರು ನದಿ ಹಾಗೂ ತೊರೆಗಳು, ವೈವಿಧ್ಯಮಯ ಹವಾಮಾನ, ಸಿರಿವಂತ ಮಣ್ಣು, ಸಮುದ್ರ ಮಟ್ಟದಿಂದ ಸುಮಾರು ೫,೦೦೦ ಅಡಿ ಎತ್ತರದವರೆಗಿನ ಭೂಪ್ರದೇಶ ಚಿತ್ತಾಕರ್ಷಕ ಅರಣ್ಯಗಳು, ಭೂವಿನ್ಯಾಸಗಳು ಜೋಗ್ ಜಲಪಾತ ಹಾಗೂ ಕೊಡಗಿನಂತಹ ನೈಸರ್ಗಿಕ ದೃಶ್ಯಗಳನ್ನು ಕಾಣಬಹುದು. ಇದು ಕಾಫಿ, ತೇಗ ಹಾಗೂ ಶ್ರೀಗಂಧ ಮತ್ತಿತರ ಅಪರೂಪದ ಮರಗಳ ನೆಲೆಬೀಡಾಗಿದೆ.

ಕರ್ನಾಟಕವು ಶ್ರೀಮಂತವಾದ ಖನಿಜ ಸಂಪತ್ತನ್ನು ಹೊಂದಿದ್ದು ಕೋಲಾರ ಚಿನ್ನದ ಗಣಿಗಳು ಹಾಗೂ ಅತ್ಯಂತ ಸಿರಿವಂತ ಸಂಡೂರು ಮ್ಯಾಂಗನೀಸ್ ಅದಿರು ವಿಶ್ವದಾದ್ಯಂತ ಸುಪ್ರಸಿದ್ಧವಾಗಿದೆ. ಪೇಪರ್ ಮಿಲ್ಸ್ ಹಾಗೂ ಭದ್ರಾವತಿಯ ಕಬ್ಬಿಣ ಹಾಗೂ ಉಕ್ಕು ಕಾರ್ಖಾನೆಗಳಂತಹ ಅತ್ಯಂತ ಹಳೆಯ ಕಾರ್ಖಾನೆಗಳು, ಹಾಗೂ ಹೊಸ ಉದ್ಯಮಗಳಾದ ಹಿಂದೂಸ್ಥಾನ್ ಏರ್‌ಕ್ರಾಫ್ಟ್, ದೂರವಾಣಿ ಕಾರ್ಖಾನೆ, ಎಲೆಕ್ಟ್ರಾನಿಕ್ ಹಾಗೂ ಮೆಷೀನ್ ಟೂಲ್ ಕಾರ್ಖಾನೆಗಳು, ಹಲವಾರು ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಸಂಸ್ಥೆಗಳು ಇತ್ತೀಚಿನ ವರ್ಷಗಳಲ್ಲಿ ಬಂದಿದ್ದು ಅಭಿವೃದ್ಧಿ ಹೊಂದುತ್ತಿವೆ. ದಕ್ಷಿಣದಲ್ಲಿ ಬೆಂಗಳೂರು ಪ್ರಮುಖ ಕೇಂದ್ರವಾಗಿದ್ದು, ಬಹು ಬೇಗನೆ ಭಾರತದ ಜ್ಞಾನಕೇಂದ್ರವಾಗಿ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. 2,000 ವರ್ಷಗಳಷ್ಟು ಹಳೆಯದಾದ ಹಾಗೂ ಇಂದಿಗೂ ಚಟುವಟಿಕೆ ಹಾಗೂ ಅಭಿವೃದ್ಧಿಯಿಂದ ತುಂಬಿ ತುಳುಕುತ್ತಿರುವ ಆದರಪೂರ್ವಕ ಜನರನ್ನು ಕರ್ನಾಟಕವು ಹೊಂದಿದೆ.

ಕನ್ನಡ ಭಾಷೆ ಹಾಗೂ ಸಾಹಿತ್ಯವು, ಪುರಾತನವೂ ಹಾಗೂ ಸಿರಿವಂತವೂ ಆಗಿರುವುದಲ್ಲದೆ, ಸಂಸ್ಕೃತ ಹಾಗೂ ಪ್ರಾಕೃತಗಳನ್ನು ಹೊರತುಪಡಿಸಿ, ಅತ್ಯಂತ ಹಳೆಯದಾದ ಹಾಗೂ ಹೇರಳವಾದ ಜೈನ ಸಾಹಿತ್ಯವನ್ನು ಹೊಂದಿದೆ. ಆಧುನಿಕ ಅಭಿವೃದ್ಧಿಯಲ್ಲೂ ಕೂಡ ಇತರ ಭಾರತೀಯ ಭಾಷೆಗಳಂತೆ, ಕನ್ನಡವೂ ಬೆಳೆದಿದೆ. ಕೆಲವು ಶತಮಾನಗಳ ಹಿಂದಕ್ಕೆ ತಿರುಗಿ ನೋಡಿದರೆ, ಚಾಲುಕ್ಯರು ಹಾಗೂ ರಾಷ್ಟ್ರಕೂಟರು ದಕ್ಷಿಣದಲ್ಲಿ ಕೇವಲ ಅತ್ಯಂತ

ಬಲಿಷ್ಠವಾದ ಸಾಮ್ರಾಜ್ಯ ನಿರ್ಮಾತೃಗಳಾಗಿರದೆ, ಸಂಸ್ಕೃತ ಹಾಗೂ ಕನ್ನಡ ಸಾಹಿತ್ಯ, ಕಲೆ, ಕಟ್ಟಡ ನಿರ್ಮಾಣ ಕಲೆ ಹಾಗೂ ಅಜಂತ, ಎಲ್ಲೋರ, ಐಹೊಳೆ, ಮುಂತಾದೆಡೆಗಳಲ್ಲಿನ ವಾಸ್ತುಶಿಲ್ಪಕಲೆಯ ಕರ್ತೃಗಳೂ ಆಗಿದ್ದರು. ಬೇಲೂರು, ಹಳೇಬೀಡು, ಸೋಮನಾಥಪುರ ಹಾಗೂ ಇತರೆಡೆ ಇರುವ ದೇವಾಲಯಗಳ ಕಟ್ಟಡ ನಿರ್ಮಾಣ ಹಾಗೂ ಮನಮೋಹಕವಾದ ಶಿಲ್ಪಗಳ ಮೂಲಕ ಹೊಯ್ಸಳರು ಪ್ರಾಚೀನ ಸಂಪ್ರದಾಯವನ್ನು ಮುಂದುವರಿಸಿದ್ದು, ಈ ಕಾರ್ಯ ಭಾರತವನ್ನು ಜಾಗತಿಕ ನಕ್ಷೆಯಲ್ಲಿ ಗುರುತಿಸುವಂತೆ ಮಾಡಿವೆ. 12ನೆಯ ಶತಮಾನದಲ್ಲಿ, ಗುಲಬರ್ಗಾ ಜಿಲ್ಲೆಯ ಕಲ್ಯಾಣದಲ್ಲಿ, ಬಿಜ್ಜಳ ಹಾಗೂ ಇತರರ ಅಲ್ಪಕಾಲದ ಆದರೆ ಅಮೋಘ ಆಳ್ವಿಕೆಯ ಕಾಲಾವಧಿಯಲ್ಲಿ, ಮಹಾನ್ ವೀರಶೈವ ಸಂತ, ಸುಧಾರಕ ಹಾಗೂ ಆಡಳಿತಗಾರನಾದ ಬಸವಣ್ಣನು ವಚನಕಾರರ ದೀರ್ಘ ಸಾಲಿಗೆ ನಾಂದಿ ಹಾಡಿದನು; ಅವರ ಪೈಕಿ 30 ಮಂದಿ ಮಹಿಳೆಯರಿದ್ದರು. ತುಂಗಭದ್ರಾ ನದಿಯದಡದ ಮೇಲೆ ರಾಜಧಾನಿಯನ್ನು ಹೊಂದಿದ ವಿಜಯನಗರ ಸಾಮ್ರಾಜ್ಯದ ಅವಧಿಯನ್ನು ಮಧ್ಯಯುಗದ ಭಾರತೀಯ ಇತಿಹಾಸದ ಅತ್ಯಂತ ಪ್ರಕಾಶಮಾನ ಯುಗವೆಂದು ಪರಿಗಣಿಸಲಾಗಿದೆ. ಮುಸಲ್ಮಾನ ಆಕ್ರಮಣಕಾರರ ವಿರುದ್ಧ ಅದು ಸುಭದ್ರ ನೆಲೆಯಾಗಿ ಕೆಲಸ ಮಾಡಿದ್ದು ಹಂಪಿಯಲ್ಲಿ ನಿರ್ಮಾಣಗೊಂಡ ದೇವಾಲಯಗಳು ಹಾಗೂ ಕಟ್ಟಡ ನಿರ್ಮಾಣ ಒಂದೆಡೆಯಾದರೆ, ಮತ್ತೊಂದೆಡೆ ಕನ್ನಡದಲ್ಲಿ ಭಕ್ತಿ ಪಂಥದ ಸಾಹಿತ್ಯದ ಉಗಮದ ನವೋದಯ ಕಾಲವಾಗಿಯೂ ಗುರುತಿಸಲಾಗಿದೆ. ಹಿಂದಿನ ಹಾಗೂ ನಂತರದ ಅವಧಿಯ ಸಂಪರ್ಕಗಳಾಗಿ ಕಡೆಗಣಿಸಲಾಗದ ಸೇವೆ ಸಲ್ಲಿಸಿದ ಮಹಾನ್ ಸಹೋದರರಾದ ಸಾಯಣ ಹಾಗೂ ಮಾಧವರ ಕೃತಿಗಳು, ಈ ಅವಧಿಗೆ ಸೇರಿವೆ.

ವಿಚಾರಶೀಲ ಹಾಗೂ ಕ್ರಿಯಾಶೀಲ ಅನುಭಾವಿಗಳಿಬ್ಬರೂ ಸೃಷ್ಟಿಸಿದ, ಧರ್ಮ, ತತ್ವಚಿಂತನೆ ಹಾಗೂ ಅನುಭಾವಿಕ ಸಾಹಿತ್ಯದಲ್ಲಿ, ಕರ್ನಾಟಕವು ಗಮನಾರ್ಹವಾದ ಪಾತ್ರವನ್ನು ವಹಿಸಿದೆ. ಧಾರ್ಮಿಕ ಹಾಗೂ ಅಧ್ಯಾತ್ಮಿಕ ಪ್ರಭಾವಗಳಿಗೆ ಜನರು ಸಹಿಷ್ಣುಗಳಾಗಿ ಹಾಗೂ ಸ್ವೀಕೃತರಾಗಿಯೂ ಪ್ರವರ್ತಿಸಿದ್ದಾರೆ. ಕ್ರಿ.ಪೂ. 3ನೆಯ ಶತಮಾನದಷ್ಟು ಮುಂಚಿತವಾಗಿಯೇ, ಉತ್ತರದಿಂದ ಜೈನರು ವಲಸೆ ಬಂದು, ಈ ನಾಡನ್ನು ತಮ್ಮ ವಾಸಸ್ಥಾನವಾಗಿ ಮಾಡಿಕೊಂಡರೆಂಬ ದಾಖಲೆಗಳಿವೆ. ಅದ್ವೈತ ತತ್ವಚಿಂತನೆಯ ಸಂಸ್ಥಾಪಕರಾದ ಶ್ರೀ ಶಂಕರಾಚಾರ್ಯರು (8ನೆಯ ಶತಮಾನ), ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿ ಶ್ರೀಶಾರದಾ ಮಠವನ್ನು ಸ್ಥಾಪಿಸಿದರು. ವಿಶಿಷ್ಟಾದ್ವೈತ ಪಂಥದ ಸಂಸ್ಥಾಪಕರಾದ ಶ್ರೀ ರಾಮಾನುಜಾಚಾರ್ಯರು, ಮೇಲುಕೋಟೆಯಲ್ಲಿ ಬಂದು ನೆಲೆಸಿದರು. ದ್ವೈತ ಪಂಥದ ಸ್ಥಾಪಕರಾದ ಮಧ್ವಾಚಾರ್ಯರು ದಕ್ಷಿಣಕನ್ನಡದ ಉಡುಪಿಯಲ್ಲಿ ಜನಿಸಿ ವ್ಯಾಪಕವಾಗಿ ಅದನ್ನು ಹರಡಿದರು. ಹಾಗೆಯೇ ಬಸವೇಶ್ವರರೂ ಸಹ, ವೀರಶೈವ ಪಂಥವನ್ನು ಅತ್ಯಂತ ಪ್ರಭಾವಶಾಲಿಯಾಗಿ ಹರಡಿದರು. ಹರಿದಾಸ ಸಾಹಿತ್ಯದ ದಾಸವರೇಣ್ಯರಾದ ಪುರಂದರ, ಕನಕ ಮುಂತಾದವರು ಜನ ಮಾನಸದ ಮೇಲೆ ಅಗಾಧ ಪ್ರಭಾವ ಬೀರಿದ್ದಾರೆ. ಇವು ರಾಜ್ಯವು ನೀಡಿದ ಕೆಲವು ಕೊಡುಗೆಗಳಾಗಿವೆ ಹಾಗೂ ಕರ್ನಾಟಕ ಮತ್ತು ದೇಶದ ಇತರ ಭಾಗಗಳೊಂದಿಗೆ ಇರುವ ಅತಿಮುಖ್ಯವಾದ ಸಂಬಂಧವನ್ನೂ, ಪ್ರಾಮುಖ್ಯತೆಯನ್ನೂ ಇದು ಸೂಚಿಸುತ್ತದೆ.


*View of ITPL, Bengaluru*






*IT Park, Hubli*

ಕರ್ನಾಟಕದ ಜನರ ದೀರ್ಘಕಾಲದ ಅಸ್ತಿತ್ವದಲ್ಲಿ ಅವರ ಇತಿಹಾಸ, ಜೀವನ ಹಾಗೂ ಸಂಸ್ಕೃತಿಯ ಕಿರು ಸಾರಾಂಶವನ್ನು ಒದಗಿಸುವ ಗುರಿಯನ್ನು ಈ ಪುಸ್ತಕದ ಅಧ್ಯಾಯಗಳು ಹೊಂದಿದೆ. ಅದರ ಸಂಪೂರ್ಣ ಹಾಗೂ ವಿವರವಾದ ದಾಖಲೆಯನ್ನು ನೀಡಲು ಸಾಧ್ಯವಾಗದು. ಬದಲಾಗಿ, ಕೆಲವು ಪ್ರಮುಖ ಘಟ್ಟಗಳ ರೂಪರೇಷೆಯನ್ನು ನೀಡಲಾಗಿದೆ. ಆದರೂ, ಈ ರೂಪರೇಷೆಯೂ ಸಹ ಕರ್ನಾಟಕದ ಸಂಪರ್ಕವನ್ನು, ಇಡೀ ಭಾರತದ ಹಾಗೂ ಅದರ ನೆರೆಹೊರೆಯ ಜನಜೀವನದೊಂದಿಗಿನ ನಿಕಟವಾದ ಸಮಗ್ರತೆಯನ್ನು ತೆರೆದಿಡುತ್ತದೆ. ಕರ್ನಾಟಕದ ಜನರು ಪ್ರತ್ಯೇಕವಾಗಿಲ್ಲ ಹಾಗೂ ಅವರ ಭಾಷೆ ಹಾಗೂ ಸಂಸ್ಕೃತಿಗಳು ದೇಶದ ಬೇರೆಡೆಗಳಿಂದ ಸ್ವತಂತ್ರವಾಗಿಯೂ ಇಲ್ಲ. ಕರ್ನಾಟಕದ ಜೀವನಾಡಿಗೆ ತನ್ನದೇ ಆದ ಮಿಡಿತವಿದ್ದರೂ, ನೆರೆಹೊರೆಯ ಪ್ರದೇಶಗಳು ಹಾಗೂ ಭಾರತದ ಹೃದಯ ಬಡಿತದೊಂದಿಗೆ ಸಾಮರಸ್ಯದಿಂದಿದ್ದು ಅದರ ಸಿರಿ–ಸಮೃದ್ಧಿಗಳು ಈ ಮಹಾನ್‌ದೇಶದೊಂದಿಗೆ ಆಪ್ತವಾಗಿ ಬೆಸೆದಿವೆ.



ಮುರುಡೇಶ್ವರ


ಸುಂದರ ಕಡಲ ಕಿನಾರೆ



ಗಾಜಿನಮನೆ, ಲಾಲ್‌ಬಾಗ್, ಬೆಂಗಳೂರು